ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Friday, the 25th June, 1982/Ashada, 4, 1904.S.E.

The House met in the Assembly Chamber of Vidhana Soudha at One of the Clock.

[MR. SPEAKER (SRI K. H. RANGANATH) in the Chair]

OBITUARY REFERENCE

I regret to make a reference to the demise of Smt. Dyavamma, who expired on 23rd June, 1982.

She was a Member of the Legislative Assembly during 1957–62 representing Gandasi Constituency in Hassan District.

I request the Hon'ble Members to stand in silence for a minute as a mark of respect to the memory of the deceased.

The House stood in silence for a Minute as a mark of respect to the memory of the deceased departed.

Starred Questions to which oral Answers were furnished

QN. No. 399 (162)

MR. SPEAKER.—We shall take up the question afterwards since the Hon'ble Minister is held up in the other House.

SRI S. H. S. BAKSHI.—Sir, I want to go for prayer. I will try to come within half-an-hour.

MR. SPEAKER.—We will take it up after wards. In case, you do not turn up, I will hold over the question.

Effecting phodi fees at the time of registration

183 SRI H. SHIVAPPA (Harihar).—Will the Minister for Revenue be pleased to state.—

(*a*) the No. of receipts to Government in respect of the fees collected towards effecting phodies at the time of registration;

(*b*) the No. of cases pending in the State in respect of effecting phodies particularly Harihar?

SRI MALLIKARJUNA M. KHARGE (Minister for Revenue).—

(a) Year	No. of cases	Phodi fees collected
1976-77	1,25,656	12,54,589
1977-78	1,63,759	20,17,294
1978-79	1,68,528	26,48,165
1979-80	1,31,177	16,56,642
1980-81	1,78,453	28,51,610
1-4-81 to 31-12-81	45,049	6,57,624
Total	8,12,622	11,085,924

(b) Total No. of cases pending in the State as 1-1-82.	60,308
Cases pending in Harihar	661

ಶ್ರೀ ಎಚ್. ಶಿವಪ್ಪ.—ಅಧ್ಯಕ್ಷರೇ, (ಅ) ಪ್ರಶ್ನೆಗೆ ಉತ್ತರವಾಗಿ ೧-೧-೮೨ ರಂದು ಇದ್ದ ರೀತ್ಯಾ ರಾಜ್ಯದಲ್ಲಿ ಇತ್ಯರ್ಥವಾಗದೇ ಉಳಿದಿರುವ ಪ್ರಕರಣಗಳ ಒಟ್ಟು ಸಂಖ್ಯೆ ೬೦,೩೦೮ ಅಂತ ಹೇಳಿದ್ದಾರೆ. ಯಾವ್ಯಾವ ವರ್ಷ ಎಷ್ಟೆಷ್ಟು ಫೋಡ್ ಆಗದೇ ಉಳಿದಿದೆ ಅದರ ಬ್ರೇಕ್‌ಅಪ್ ಫಿಗರ್ಸ್ ಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಯಾವ್ಯಾವ ವರ್ಷ ಎಷ್ಟೆಷ್ಟು ಸಂಖ್ಯೆಯಲ್ಲಿ ನಿಂತಿದೆ ಅನ್ನುವ ಸಂಖ್ಯೆ ಈಗ ನನ್ನ ಹತ್ತಿರ ಇಲ್ಲ ಒಟ್ಟಾರೆ ಸಂಖ್ಯೆ ೬೦,೩೦೮ ಅಂತ ಇದೆ, ಅದನ್ನು ಹೇಳಿದ್ದೇನೆ. ಆಯಾ ವರ್ಷದ ಅಂಕಿಅಂಶ ಇಲ್ಲ.

ಶ್ರೀ ಎಚ್. ಶಿವಪ್ಪ.—ಸ್ವಾಮಿ, ಮಾನ್ಯ ಮಂತ್ರಿಗಳು ಫೋಡಿಗಳು ಜಾರಿಗೆ ತರುವಲ್ಲಿ ರಾಜ್ಯದಲ್ಲಿ ಇತ್ಯರ್ಥವಾಗದೇ ಉಳಿದಿರುವ ಪ್ರಕರಣಗಳ ಸಂಖ್ಯೆ ಒಟ್ಟು ಸಂಖ್ಯೆ ೬೦,೩೦೮ ಅಂತ ಹೇಳಿದ್ದಾರೆ. ಇದರೊಂದಿಗೆ ಹರಿಹರದಲ್ಲಿ ಇತ್ಯರ್ಥವಾಗದೇ ಉಳಿದಿರುವ ಪ್ರಕರಣಗಳ ಸಂಖ್ಯೆ ೬೬೧ ಎಂದು ಹೇಳಿದ್ದಾರೆ. ಸ್ವಾಮಿ, ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಫೈಲ್ ಕ್ಲಿಯರೆನ್ಸ್ ಆಯಿತಲ್ಲಾ, ಈ ಒಂದು ಫೈಲ್ ವಿಲೇವಾರಿ ತತ್ವಕ್ಕೆ ಇದು ಅನ್ಯಾಯವಾಯಿತೋ ಇಲ್ಲವೋ ಸ್ವಾಮಿ, ಈ ಬಗ್ಗೆ ಮಾನ್ಯ ಮಂತ್ರಿಗಳು ಏನು ತಿಳಿಸುತ್ತಾರೆ ಅನ್ನುವುದನ್ನು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ವಾಮಿ, ಇಡೀ ರಾಜ್ಯದಲ್ಲಿ ೬೧ ೦೦೦ ಕೇಸಸ್ ಪೆಂಡಿಂಗ್ ನಲ್ಲಿತ್ತು. ಈ ಬಗ್ಗೆ ಈಗಾಗಲೇ ಒಂದು ಟಾರ್ಗೆಟ್ ಅನ್ನು ಫಿಕ್ಸ್ ಮಾಡಿದ್ದೇವೆ. ಪ್ರತಿಯೊಬ್ಬ ಸರ್ವೇಯರ್ ಕನಿಷ್ಟಪಕ್ಷ ೧೦ ಫೋಡಿ ಕೇಸಸ್ ಆದರೂ ಮಾಡಬೇಕಂ, ಹಾಗೆ ಮಾಡದೇ ಹೋದರೆ ಅವರಿಗೆ ಪಗಾರ ಕೊಡಬಾರದಂ ಅನ್ನುವ ಡೈರಕ್ಷನ್ಸ್ ಅನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಸಂವಾರು ೬೬೦ ಜನ ಸರ್ವೇಯರ್ಸ್ ಪ್ರತಿ ತಿಂಗಳು ೧೦-೧೦ ರಂತೆ ಈ ಕೇಸಸ್‌ನ್ನು ತೀರ್ಮಾನ ಮಾಡಬೇಕು ಅನ್ನುವ ವ್ಯವಸ್ಥೆ ಮಾಡಿದ್ದೇವೆ. ಆಲ್ಲದೆ ಈಗ ಈ ಇಲಾಖೆಯಲ್ಲಿ ೪೦೦ ವೇಕೆನಿ ಗಳು ಖಾಲಿಯಾಗಿವೆ, ಅನೇಕ ಕಾರಣಗಳಿಂದ ಅವಕ್ಕೆ ರೆಕ್ರೂಟ್‌ಮೆಂಟ್ ಮಾಡಿಲ್ಲಾ, ಆದರಿಂದ ಲೇಟ್ ಆಗಿದೆ. ಈಗ ಉಳಿದಿರತಕ್ಕಂಥಾ ಎಲ್ಲಾ ಫೋಡಿ ಕೇಸಸ್‌ಗಳನ್ನೂ ಇದರ ಬಗ್ಗೆ ಒಂದು ಟಾರ್ಗೆಟ್ ಫಿಕ್ಸ್ ಮಾಡಿಕೊಂಡು ಕಂಪ್ಲೀಟ್ ಮಾಡಬೇಕು ಅನ್ನುವ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಎಚ್. ಶಿವಪ್ಪ.—ಸ್ವಾಮಿ, ಖಾಲಿ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡಿದರೆ ಶೀಘ್ರವಾಗಿ ಈ ಫೋಡಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲವೇ ?

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಈಗಾಗಲೇ ನಾವು ಕಮಿಟಿಯನ್ನು ಕಾನ್ಸ್‌ಟಿಟ್ಯೂಟ್ ಮಾಡಿ ಆದಷ್ಟು ಬೇಗ ರೆಕ್ರೂಟ್‌ಮೆಂಟ್ ಮಾಡಲಿಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ತಹಸೀಲ್ದಾರ್ ಅವರ ಕಛೇರಿಯಲ್ಲಿ ಒಬ್ಬರೇ ಸರ್ವೆಯರ್ ಫೋಡಿ ಕೆಲಸ ಮಾಡುವುದು.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ನಾವು ಒಂದು ಟಾರ್ಗೆಟ್ ಫಿಕ್ಸ್ ಮಾಡಿ ಪ್ರತಿ ತಿಂಗಳು ಫೋಡಿ ಕೇಸುಗಳು–೧೦, ಮ್ಯುಟೇಷನ್ಸ್ ಮತ್ತು ಆಲಿನಿಯೇಷನ್ಸ್ ೨೦ ಕೇಸುಗಳನ್ನು ಕ್ಲಿಯರ್ ಮಾಡ ಬೇಕು ಎಂದು ಹೇಳಿದ್ದೇವೆ. ಕೆಲವು ಕಡೆ ಅನೇಕ ವೇಕೆನ್ಸಿಗಳು ಇದ್ದು ಈ ಕೆಲಸ ತಡವಾಗಿದೆ. ಈಗಾಗಲೇ ನಾವು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕಮಿಟಿಯನ್ನು ಕಾನ್ಸ್ಟಿಟ್ಯೂಟ್ ಮಾಡಿ ಆದಷ್ಟು ಬೇಗ ರೆಕ್ರೂಟ್‌ಮೆಂಟ್ ಮಾಡಿ ಎಲ್ಲಾ ಕಡೆಗೂ ಈ ಕೆಲಸ ಜಾಗ್ರತೆಯಾಗಿ ಆಗುವಂತೆ ವ್ಯವಸ್ಥೆ ಮಾಡುತ್ತೇವೆ.

Janatha Housing Scheme in the State

263 SRI A. LAKSHMI SAGAR (Chickpet) & SRI S. R. BOMMAI (Hubli Rural).–Will the Minister for Housing and Urban Development be pleased to State.—

(*a*) The total number of houses built and allotted under Janatha housing scheme in the State of Karnataka–Figures may be furnished;

SRI DHARAM SINGH (Minister for Housing and Urban Development).—

(*a*) The total number of houses built and allotted under Janatha housing scheme is 2,82,578 from 1973 (the year of inception) to 31-12-81. The break up of the same is as noted below:

		No. of houses
1. Non-Hudco 1973-1980	...	1,07,010
2. Experimental Low Cost Housing Scheme 1976 to 31-12-81	...	48,644
3. Hudco assisted Peoples Housing Scheme 1978 to 31-12-81	...	1,22,714
4. Bank assisted Peoples Housing Scheme 1980 to 31-12-81	...	4,210
Total		2,82,578

ಶ್ರೀ ಎ. ಲಕ್ಷ್ಮೀಸಾಗರ್,—ತಾವು ನಾಲ್ಕು ವಿಧವಾದ ಯೋಜನೆಗಳ ಪ್ರಕಾರ ಸುಮಾರು ೨,೮೨,೫೭೮ ಮನೆಗಳನ್ನು ೩೧–೧೨–೮೧ರವರೆಗೆ ಕಟ್ಟಲಾಗಿದೆಯೆಂದು ಉತ್ತರದಲ್ಲಿ ತಿಳಿಸಿದ್ದೀರಿ. ತಾವು ಜಿಲ್ಲಾವಾರು ಜನತಾ ಮನೆಗಳ ಸಂಖ್ಯೆಯನ್ನು ಕೊಡುವುದಕ್ಕಾಗುತ್ತದೆಯೇ ?

ಶ್ರೀ ಧರ್ಮಸಿಂಗ್.—ಜಿಲ್ಲಾವಾರು ಅಂಕಿಗಳನ್ನು ನಂತರ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಕಟ್ಟಿದಂಥ ಜನತಾ ಮನೆಗಳಲ್ಲಿ ಅನೇಕ ಮನೆಗಳು ಅರ್ಧ ಬಿದ್ದು, ಕೆಲವು ಪೂರ್ತಿಯಾಗಿ ಬಿದ್ದುಹೋಗಿವೆ ಮತ್ತು ಸರಿಯಾಗಿ ಕಟ್ಟಿಲ್ಲ ಎನ್ನುತಕ್ಕ ದೂರುಗಳು ಬಂದಿವೆ. ಆದಕಾರಣ ಇವುಗಳನ್ನು ದುರಸ್ತಿ ಮಾಡಲು ತಾವು ಯೋಜನೆಯನ್ನೇನಾದರೂ ಹಾಕಿ